**O. S. No:113/2020**
**DW:1**

(ಇಂದು ದಿನಾಂಕಃ **19-02-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ ಕೆ ಎನ್ ಕೆ ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಮಾತ್ರ ಓದು ಬರಹ ಬರುತ್ತದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಬಗ್ಗೆ ಮಾಹಿತಿ ಇರುತ್ತದೆ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದಂತೆ ಜಮೀನು ಸರ್ವೇ ನಂಃ 306 ರಲ್ಲಿ 2 ಎಕರೆ ಜಮೀನನ್ನು ಶಿವಪ್ಪ ಹಡಗಲಿ ಎನ್ನುವವರಿಗೆ 3 ನೇ ಪ್ರತಿವಾದಿ ಮಾರಾಟ ಮಾಡಿರುತ್ತಾರೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ಸದರಿ ಜಮೀನು ಸಂತೋಷ ಹಡಗಲಿ ಎನ್ನುವವರಿಗೆ ಮಾರಾಟವಾಗಿರುತ್ತದೆ ಎಂದರೆ ಸರಿ. ಕಾರಣ ನನಗೆ ದಾವೆಯ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ನನ್ನ ತಂದೆ ಜಮೀನುಗಳನ್ನು ಖರೀದಿಸಿರುತ್ತಾರೆ ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಖಂಡಿಕೆ ಸಂಃ 6 ಮತ್ತು 7 ರಲ್ಲಿ ಕಾಣಿಸಿರುವ ಅಂಶಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳೆಲ್ಲವೂ ಖರೀದಿ ಹಿಡಿದ ಆಸ್ತಿಗಳೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-1 ರಲ್ಲಿ ಯಲ್ಲರಡ್ಡಿಯವರು 2 ಮತ್ತು 3 ನೇ ಪ್ರತಿವಾದಿಗೆ ಕೇವಲ ಕುಟುಂಬದ ಉನ್ನತಿ ಸಲುವಾಗಿ ಮಾತ್ರ ಭಕ್ಷೀಸು ಪತ್ರ ಮಾಡಿಕೊಟ್ಟಿರುತ್ತಾರೆ ಎಂದು ಬರೆಸಲಾಗಿದೆ ಎಂದರೆ ಸರಿಯಲ್ಲ. ಸದರಿ ದಾಖಲೆಯ ಪುಟ ಸಂಃ 3 ರಲ್ಲಿ ಕುಟುಂಬದ ಉನ್ನತಿ ಸಲುವಾಗಿ ಎಂದು ಉಲ್ಲೇಖ ಇದೆ ಎಂದರೆ ಸರಿ. ನಿಡಿ-2 ರಿಂದ ನಿಡಿ-4 ರಲ್ಲಿ ಕುಟುಂಬದ ಹೊಂದಾಣಿಕೆಯ ಸಲುವಾಗಿ ಎಂದು ಉಲ್ಲೇಖ ಇದೆ ಎಂದರೆ ಸರಿ. ಸದರಿ ದಾಖಲೆಗಳು ನಮ್ಮ ಕುಟುಂಬದ ಹೊಂದಾಣಿಕೆಗಾಗಿ ಮಾಡಿದ್ದು ಆದರೆ ಅದು ಭಕ್ಷೀಸು ಪತ್ರಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನಿಡಿ-1 ರಿಂದ 4 ಕ್ಕೆ ವಾದಿ ಸಹಿ ಮಾಡಿರುವುದಿಲ್ಲ. ವಾದಿಗೆ ದಾವಾ ಆಸ್ತಿಯಲ್ಲಿ ಪಾಲು ಕೊಡಬಾರದೆಂದು ಸದರಿ ದಾಖಲೆಗಳನ್ನು ಸೃಷ್ಠಿ ಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಖಂಡಿಕೆ ಸಂಃ 10 ರಿಂದ 19 ರಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಸರ್ವೇ ನಂಃ 89/1+2/ಸಿ-1 ಎ ನೇದ್ದಕ್ಕೆ ಸಂಬಂಧಿಸಿ ತೊಂಡಿ ವಾಟ್ನಿ ಮಾಡಿಕೊಂಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಮದುವೆಯ ಕಾಲಕ್ಕೆ 50 ತೋಲ ಬಂಗಾರ

ಹಾಗೂ 2 ಕೆ. ಜಿ. ಬೆಳ್ಳಿ ಸಾಮಾನುಗಳನ್ನು ನೀಡಿದ ಮದುವೆ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ವಾದಿಯ ಪಿತ್ರಾರ್ಜಿತ ಆಸ್ತಿಗಳಾಗಿದ್ದು, ಅವುಗಳಲ್ಲಿ ವಾದಿಗೆ ಪಾಲು ಇದ್ದು ಅದನ್ನು ಕೊಡಬಾರದು ಎನ್ನುವ ಕಾರಣಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-1 ರಿಂದ 4, 7, 9 ಮತ್ತು 10 ಗಳನ್ನು ಖೊಟ್ಟಿಯಾಗಿ ಸೃಷ್ಠಿ ಮಾಡಿಕೊಂಡು ಹಾಜರು ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎಚ್ ಡಿ ಜಿ ವಕೀಲರಿಂದಃ**

ಸಮಯ ಕೋರಿದ್ದು, ರೂ200/- ದಂಡದೊಂದಿಗೆ ಮುಂದುಡಲಾಯಿತು.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**